ವಿಷಯ: ಕಲಘಟಗಿ ತಾಲೂಕಿನ ಬೇಗೂರು ಗ್ರಾಮದ ವ್ಯವಸಾಯ ಸಹಕಾರಿ ಸಂಘದ ಕಾರ್ಯದರ್ಶಿಯವರು ಮಾಡಿರುವ ಹಣದ ಅವ್ಯವಹಾರದ ಬಗ್ಗೆ

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ(ಕಲಘಟಗಿ): ಮಾನ್ಯ ಅಧ್ಯಕ್ಷರೆ ನನ್ನ ಕ್ಷೇತ್ರವಾದ ಕಲಘಟಗಿ ತಾಲೂಕಿನ ಬೇಗೂರು ಗ್ರಾಮದಲ್ಲಿ 2004ನೇ ಇಸವಿಯಲ್ಲಿ ಒಂದು ದೊಡ್ಡ ಅನಾಹುತವಾಯಿತು. ಆ ಗ್ರಾಮದಲ್ಲಿರುವಂಥ ವ್ಯವಸಾಯ ಸಹಕಾರ ಸಂಘದ ಕಾರ್ಯದರ್ಶಿಯವರು ನಿರಂತರವಾಗಿ ಅಂದರೆ 2000–01,2001–02, 2002–03ರಿಂದಲೂ ಹಣದ ಅವ್ಯವಹಾರ ಮಾಡಿದ್ದಾರೆ. 2001ರಲ್ಲಿ 1,70,000, 2002ರಲ್ಲಿ 1,35,000 ಮತ್ತು 2003ರಲ್ಲಿ 12 ಲಕ್ಷ ರೂಪಾಯಿಗಳು, ಆಹಾರಧಾನ್ಯಗಳ ವಿಚಾರದಲ್ಲಿ 2 ಲಕ್ಷ ರೂಪಾಯಿಗಳು ಶಿಲ್ಕಿನ ಹಣ 1,65,000 ರೂಪಾಯಿಗಳು ಹೀಗೆ ಎಲ್ಲಾ ಸೇರಿ ಒಟ್ಟು ಸುಮಾರು 30 ಲಕ್ಷ ರೂಪಾಯಿಗಳು ರೈತರ ಹಣವನ್ನು ಅವ್ಯವಹಾರ ಮಾಡಿದ್ದಾರೆ. ಅವರು ನಿರಂತರವಾಗಿ 10–15 ವರ್ಷಗಳಿಂದ ನಮ್ಮ ರೈತರಿಗೆ ಬಹಳ ಕಿರುಕುಳವನ್ನು ಕೊಡುತ್ತಿದ್ದಾನೆ. ಆ ಕಾರ್ಯ ದರ್ಶಿಯನ್ನು ಬದಲಾವಣೆ ಮಾಡಬೇಕೆಂದು ರೈತರು ತಹಶೀಲ್ದಾರರ ಮುಂದೆ ಬೇಡಿಕೆ ಇಟ್ಟರು. ತಹಶೀಲ್ದಾರ್‌ರವರು ಅವನಿಗೆ ಆದೇಶ ಮಾಡಿ ಬೇರೆ ಕಾರ್ಯ ದರ್ಶಿಗೆ ತಾವು ಅಲ್ಲಿ ಅವಕಾಶ ಕೊಡಬೇಕೆಂದು ಹೇಳಿದರು. ಕೆಸಿಸಿ ಬ್ಯಾಂಕಿನ ಎಂ.ಡಿಯವರೂ ಆದೇಶ ಮಾಡಿದ್ದಾರೆ. ಆದರೆ ಅವನು ಯಾರದೇ ಆದೇಶವನ್ನು ಪಾಲನೆ ಮಾಡದೇ ನಿರಂತರವಾಗಿ ರೈತರಿಗೆ ಕಿರುಕುಳವನ್ನು ಕೊಡುತ್ತಿದ್ದಾನೆ. ಗ್ರಾಮಕ್ಕೆ ರಾತ್ರೋ ರಾತ್ರಿ ಪೊಲೀಸರು ಹೋಗಿ 65 ಜನರಿಗೆ ಚಿತ್ರಹಿಂಸೆಯನ್ನು ಕೊಟ್ಟು ಅವರ ಮೇಲೆ ಕೇಸು ಹಾಕಿದ್ದಾರೆ. ಆ ಕೇಸು ಹಾಕಿದಂದಿನಿಂದ ಇವತ್ತಿನವರೆಗೆ ಏಕೆ ಕೇಸನ್ನು ಹಾಕಿದ್ದಾರೆ ಎನ್ನುವುದು ಗೊತ್ತಿಲ್ಲ. ಸುಮಾರು 16 ಸಾವಿರ ಜನಸಂಖ್ಯೆ ಇರುವಂಥ 1,400 ಮತದಾರರು ಇರುವಂಥ ಈ ಗ್ರಾಮದಲ್ಲಿ ಇಡೀ ಊರಿನವರೇ ಒಂದು ಕಡೆ ಇದ್ದರೆ, ಆ ಮನುಷ್ಯನೇ ಒಂದು ಕಡೆ ಇದ್ದಾನೆ. ಇವತ್ತು ಸರ್ಕಾರ ಯಾವುದೇ ರೀತಿಯಲ್ಲಿ ಆ ಜನರ ರಕ್ಷಣೆಗೆ ಹೋಗುತ್ತಿಲ್ಲ. ಬೇರೆಯವರಿಗೆ ಚಾರ್ಜ್ ಕೊಡಿ ಎಂದು ನಾಲ್ಕು ಸಲ ಆ ಕಾರ್ಯದರ್ಶಿಗೆ ಆದೇಶ ಮಾಡಿದ್ದರೂ, ಅವನು ಇವತ್ತಿನವರೆಗೂ ಬೇರೆಯವರಿಗೆ ಚಾರ್ಜ್ ಕೊಟ್ಟಿಲ್ಲ. ಹೀಗಾಗಿ ಈ ಒಂದು ವ್ಯವಸಾಯ ಸಹಕಾರಿ ಬ್ಯಾಂಕಿನಲ್ಲಿ ರೈತರಿಗೆ ನಿರಂತರವಾಗಿ ಕಿರುಕುಳವಾಗುತ್ತಿದೆ. ಆ ಗ್ರಾಮದವರು ಸಂಬಂಧಪಟ್ಟವರಿಗೆ ಅನೇಕ ಲೆಟರ್‌ಗಳನ್ನು ಬರೆದಿದ್ದಾರೆ. ತಮ್ಮ ಮೂಲಕ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸಂಬಂಧಪಟ್ಟಂಥ ಸಚಿವರು ತಕ್ಷಣ ಇದರಲ್ಲಿ ಮಧ್ಯ ಪ್ರವೇಶಿಸಿ, ಆ ಗ್ರಾಮದಲ್ಲಿ ಏನು ಅನ್ಯಾಯ ನಡೆದಿದೆ ಎನ್ನುವುದನ್ನು ಪರಿಶೀಲನೆ ಮಾಡಿ, ತಪ್ಪ ಮಾಡಿರುವಂಥ ಅವನಿಗೆ ಶಿಕ್ಷೆ ಕೊಡಬೇಕು. ಅಲ್ಲದೆ, ರೈತರಿಗೆ ಕೊಡಬೇಕಾದಂಥ ಹಣವನ್ನು ಅವನ ಕಡೆಯಿಂದ ಕೊಡಿಸಬೇಕು ಎಂದು

ನಾನು ತಮ್ಮ ಮೂಲಕ ಸಂಬಂಧಪಟ್ಟ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಬಹಳ ಗುರುತರವಾದ ಆಪಾದನೆಗಳು ಮತ್ತು ಅವುಗಳ ಬಗ್ಗೆ ಮಾನ್ಯ ಶಾಸಕರು ಪ್ರಶ್ನೆ ಮಾಡಿದ್ದಾರೆ. ಎಲ್ಲಿ ಅವ್ಯವಹಾರ ನಡೆದಿದೆ. ಅದರ ಮೇಲೆ ಕ್ರಮ ಕೈಗೊಳ್ಳಬೇಕಾಗಿತ್ತು. ಇಲ್ಲಿಯವರೆಗೆ ಕ್ರಮ ಕೈಗೊಳ್ಳದೇ ಇರತಕ್ಕಂಥದ್ದು ವಿಷಾದನೀಯ ಸಂಗತಿ. ಆದರೂ ಕೂಡ ತಾವು ಈ ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಸಚಿವರು ಬಂದ ತಕ್ಷಣವೇ ಈ ವಿಚಾರವನ್ನು ಅವರ ಗಮನಕ್ಕೆ ತಂದು ಅವರ ಮೇಲೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ. ದುರ್ವ್ಯವಹಾರ ಆಗಿರತಕ್ಕಂಥ ಹಣವನ್ನು ವಸೂಲಿ ಮಾಡುತ್ತೇವೆ. ಆ ಗ್ರಾಮದಲ್ಲಿ ಆಗಿರತಕ್ಕಂಥ ಅಸಂತೋಷವನ್ನು ಸರಿಪಡಿಸುತ್ತೇವೆ.

ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ: ಮಾನ್ಯ ಅಧ್ಯಕ್ಷರೆ, ಕಡೆಯದಾಗಿ ಒಂದು ಪ್ರಶ್ನೆಯನ್ನು ಕೇಳಿಬಿಡುತ್ತೇನೆ.

ಅಧ್ಯಕ್ಷರು: No,no ಈಗ ಶ್ರೀ ಧ್ರುವನಾರಾಯಣರವರು ಪ್ರಸ್ತಾಪ ಮಾಡಿ.

ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ: ಮಾನ್ಯ ಅಧ್ಯಕ್ಷರೇ,....

ಅಧ್ಯಕ್ಷರು: ಕುಳಿತು ಕೊಳ್ರಿ, ಮತ್ತೆ ಕ್ಲಾರಿಫಿಕೇಷನ್‌ಗೆ ಅವಕಾಶವಿಲ್ಲ

(ಗೊಂದಲ)

ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ: ಅಲ್ಲಿ ದೊಡ್ಡ ಅನಾಹುತವಾಗಿದೆ.

ಅಧ್ಯಕ್ಷರು: ಒಬ್ಬೊಬ್ಬ ಸದಸ್ಯರಿಗೂ ನಾನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಬೇಕು ಈಗ ಧ್ರುವನಾರಾಯಣರವರು ಮಾತನಾಡಿ.

ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ: ಒಂದೇ ಒಂದು ವಿಷಯ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ ಶ್ರೀ ಚಿಕ್ಕನಗೌಡ್ರೆ ದಯಮಾಡಿ ಸ್ವಲ್ಪ ನಿಯಮಗಳನ್ನು ಅರ್ಥ ಮಾಡಿಕೊಳ್ಳಿ.